# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 682 |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.12.2024. |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಭಾಗ್ಯಲಕ್ಷ್ಮಿ ಯೋಜನೆ ಆರಂಭಗೊಂಡಿದ್ದು ಯಾವಾಗ: 2024 ಅಕ್ಟೋಬರ್ ಅಂತ್ಯಕ್ಕೆ ಈ ಯೋಜನೆಯಡಿ ನೊಂದಾಯಿಸಲ್ಪಟ್ಟಿರುವ ಮಕ್ಕಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | • ಭಾಗ್ಯಲಕ್ಷ್ಮಿ ಯೋಜನೆಯನ್ನು 2006-07ರಲ್ಲಿ ಜಾರಿಗೆ ತಂದಿದ್ದು, 2019-20ರವರೆಗೆ ಪಾಲುದಾರ ಹಣಕಾಸು ಸಂಸ್ಥೆ ಭಾರತೀಯ ಜೀವ ವಿಮಾ ನಿಗಮ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗಿದೆ. 2020-21 ರಿಂದ ಸದರಿ ಯೋಜನೆಯನ್ನು ಮರುವಿನ್ಯಾಸಗೊಳಿಸಿ ಅಂಚೆ ಇಲಾಖೆಯ ಮೂಲಕ ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಯೋಜನೆಯಾಗಿ ಮುಂದುವರೆಸಲಾಗುತ್ತಿದೆ.<br>• ಪ್ರಾರಂಭದಿಂದ ಅಕ್ಟೋಬರ್-2024ರ ಅಂತ್ಯಕ್ಕೆ ನೊಂದಾಯಿಸಲ್ಪಟ್ಟಿರುವ ಮಕ್ಕಳ ಸಂಖ್ಯೆ 36.00 ಲಕ್ಷ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಆ | ಈ ಪೈಕಿ ಎಷ್ಟು ಮಕ್ಕಳಿಗೆ ಬಾಂಡ್ ವಿತರಿಸಲಾಗಿದೆ; ಬಾಂಡ್ ವಿತರಿಸದೇ ಇರುವ ಮಕ್ಕಳ ಸಂಖ್ಯೆ ಎಷ್ಟು:(ಜಿಲ್ಲಾವಾರು ಮಾಹಿತಿ ನೀಡುವುದು) | • 2006-07ರಿಂದ 2019-20ರವರೆಗೆ ನೋಂದಣಿಯಾದ ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್ ವಿತರಿಸಲಾಗಿದ್ದು,. ಮುಂದುವರೆದು 2020-21 ರಿಂದ ಭಾಗ್ಯಲಕ್ಷ್ಮಿ-ಸುಕನ್ಯ ಸಮೃದ್ಧಿ ಯೋಜನೆಯಡಿ ನೋಂದಣಿಯಾದ ಮಕ್ಕಳಿಗೆ ಅಂಚೆ ಇಲಾಖೆಯ ಮೂಲಕ ಪಾಸ್ ಬುಕ್ ವಿತರಿಸಲಾಗಿದೆ.<br>• ಬಾಂಡ್/ಪಾಸ್ ಬುಕ್ ವಿತರಿಸುವ ಫಲಾನುಭವಿಗಳ ಸಂಖ್ಯೆ. 34.77 ಲಕ್ಷ<br>• ಪಾಸ್ ಬುಕ್ ವಿತರಿಸಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ: 1.23 ಲಕ್ಷ .<br>• ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಇ | 2024 ನವೆಂಬರ್ 30ಕ್ಕೆ ಮೆಚ್ಯೂರ್ ಆಗಿರುವ ಬಾಂಡ್ ಗಳ ಸಂಖ್ಯೆ ಎಷ್ಟು: ಎಷ್ಟು ಬಾಂಡ್ ಗಳ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿದೆ; ಬಾಕಿ ಇರುವವರಿಗೆ ಕಾಲಮಿತಿಯೊಳಗೆ ಹಣ ನೀಡಲು ಕೈಗೊಂಡಿರುವ ಕ್ರಮಗಳೇನು; | 2006-07ನೇ ಸಾಲಿನಲ್ಲಿ ನೋಂದಣಿಯಾಗಿ 18 ವರ್ಷ ತುಂಬಿರುವ ಅಂದಾಜು 2.39 ಲಕ್ಷ ಬಾಂಡ್ ಗಳು ಮೆಚ್ಯುರ್ ಆಗುತ್ತವೆ.<br>ಭಾಗ್ಯಲಕ್ಷ್ಮಿ ಯೋಜನೆಯಡಿ ಪರಿಪಕ್ವ ಮೊತ್ತವನ್ನು ನೇರವಾಗಿ 18 ವರ್ಷ ಪೂರ್ಣಗೊಂಡ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿ ಮಾಡುವ ಸಲುವಾಗಿ LIC ಸಂಸ್ಥೆಯವರು ಕೋರಿರುವಂತೆ ಭಾಗ್ಯಲಕ್ಷ್ಮಿ ತಂತ್ರಾಂಶದಲ್ಲಿ Field Create ಮಾಡುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹರಾದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಪರಿಪಕ್ವ ಮೊತ್ತವು, LIC ಸಂಸ್ಥೆಯಿಂದ ಜಮೆ ಮಾಡಲಾಗುವುದು. |

| | | |
|---|---|---|
| ಈ | ಈ ಯೋಜನೆ ಜಾರಿಗೆ ಬಂದಾಗ ವಿಧಿಸಿದ್ದ ಷರತ್ತುಗಳೇನು: ಈಗ ಮೆಚ್ಯೂರಿಟಿ ಆದ ಫಲಾನುಭವಿಗಳಿಗೆ ಹೆಚ್ಚುವರಿ ಷರತ್ತುಗಳನ್ನು ವಿಧಿಸುತ್ತಿರುವುದಕ್ಕೆ ಕಾರಣಗಳೇನು: ಷರತ್ತುಗಳನ್ನು ಸಡಿಲಿಸಿ ಮೆಚ್ಯೂರ್ ಆಗಿರುವ ಎಲ್ಲಾ ಬಾಂಡ್ ಗಳ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ: ಈ ಬಗ್ಗೆ ಸರ್ಕಾರದ ನಿಲುವೇನು? | • ದಿನಾಂಕ:06-03-2015ರ ಭಾಗ್ಯಲಕ್ಷ್ಮಿ ಯೋಜನೆಯ ಸರಳೀಕರಣದ ಮಾರ್ಗಸೂಚಿಗಳನ್ವಯ ವಿಧಿಸಿದ್ದ ಷರತ್ತುಗಳು ಈ ಕೆಳಕಂಡಂತಿವೆ.<br>1. ಮೂಲ ಬಾಂಡ್.<br>2. ಬಿ.ಪಿ.ಎಲ್ ಕಾರ್ಡ್ ಪ್ರತಿ.<br>3. ಜನನ ಪ್ರಮಾಣ ಪತ್ರ.<br>4. ಕುಟುಂಬದಲ್ಲಿ ಮಕ್ಕಳ ಸಂಖ್ಯೆ 2 ಅನ್ನು ಮೀರಿರಬಾರದು. (ದಿ:1-04-2015 ರಿಂದ ಜನಿಸಿದ ಮಕ್ಕಳಿಗೆ ಅನ್ವಯಿಸುವುದು)<br>5. ಕಡ್ಡಾಯವಾಗಿ 8ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು.<br>6. ಬಾಲಕಾರ್ಮಿಕ ನಿಷೇಧ ಕಾಯ್ದೆ, 1986 ರಂತೆ ಬಾಲ ಕಾರ್ಮಿಕಳಾಗಿರತಕ್ಕದ್ದಲ್ಲ.<br>7. 18 ವರ್ಷ ಪೂರೈಸುವ ಮೊದಲು ವಿವಾಹವಾಗಿರಬಾರದು.<br><br>• ಈಗ ಮೆಚ್ಯೂರಿಟಿ ಆದ ಫಲಾನುಭವಿಗಳಿಗೆ ಹೆಚ್ಚುವರಿ ಷರತ್ತುಗಳನ್ನು ವಿಧಿಸುತ್ತಿರುವುದಿಲ್ಲ.<br><br>• ಭಾಗ್ಯಲಕ್ಷ್ಮಿ ಯೋಜನೆಯ ದಿ:06-03-2015ರ ಸರಳೀಕರಣದ ಮಾರ್ಗಸೂಚಿಯನ್ವಯ ಯೋಜನೆಯ ಸೌಲಭ್ಯ ಪಡೆಯಲು ದಾಖಲಾತಿಗಳನ್ನು ಸರಳೀಕರಣಗೊಳಿಸಲಾಗಿದೆ.<br>1. ಮೂಲ ಬಾಂಡ್ ಕಳೆದು ಹೋಗಿದ್ದಲ್ಲಿ ಜೆರಾಕ್ಸ್ ಬಾಂಡ್ ಜೊತೆಗೆ ಎಫ್.ಐ.ಆರ್ ಪ್ರತಿಯನ್ನು ಲಗತ್ತಿಸಲು ಹಾಗೂ ಬಾಂಡ್ ಜೆರಾಕ್ಸ್ ಪ್ರತಿಯು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಭಾಗ್ಯಲಕ್ಷ್ಮಿ ತಂತ್ರಾಂಶದಲ್ಲಿ Display ಆಗುವ ಮಗುವಿನ ವಿವರದ ಪ್ರತಿಗೆ CDPO ದೃಢೀಕರಣ.<br>2. ಫಲಾನುಭವಿಯ ವ್ಯಾಸಂಗ ಪ್ರಮಾಣ ಪತ್ರ, ಬಾಲ ಕಾರ್ಮಿಕಳಾಗದಿರುವ ಬಗ್ಗೆ ಮತ್ತು 18 ವರ್ಷ ಪೂರೈಸುವ ಮೊದಲು ವಿವಾಹವಾಗದಿರುವ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಧೃಡೀಕರಣ ಪತ್ರ.<br>3. ನೇರವಾಗಿ ಫಲಾನುಭವಿಯ ಖಾತೆಗೆ ಪರಿಪಕ್ವ ಮೊತ್ತ ಜಮೆಯಾಗಲು ಅನುವಾಗುವಂತೆ ಚಾಲ್ತಿಯಲ್ಲಿರುವ ಬ್ಯಾಂಕ್ ಅಕೌಂಟ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ. |

ಮಮಇ 239 ಮಮಅ 2024

**(ಲಕ್ಷ್ಮೀ ಆರ್.ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

## ಭಾಗ್ಯಲಕ್ಷ್ಮಿ ಯೋಜನೆಯಡಿ 2006-07 ರಿಂದ ಅಕ್ಟೋಬರ್-2024 ರ ಅಂತ್ಯದವರೆಗೆ ನೋಂದಣಿಯಾದ, ವಿತರಿಸಲಾದ ಹಾಗೂ ವಿತರಿಸದೇ ಬಾಕಿ ಇರುವ ಫಲಾನುಭವಿಗಳ ಮಾಹಿತಿಯ ವಿವರ (ಜಿಲ್ಲಾವಾರು ಮಾಹಿತಿ)

| ಕ್ರ.ಸಂ | ಜಿಲ್ಲೆಗಳ ಹೆಸರು | ನೋಂದಣಿಯಾದ ಫಲಾನುಭವಿಗಳ ಸಂಖ್ಯೆ | ವಿತರಿಸಿದ ಬಾಂಡ್/ಪಾಸ್ ಬುಕ್ ಗಳ ಸಂಖ್ಯೆ | ವಿತರಿಸಲು ಬಾಕಿ ಇರುವ ಪಾಸ್ ಬುಕ್ ಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 126563 | 122179 | 4384 |
| 2 | ಬೆಂ. ನಗರ | 195288 | 188577 | 6711 |
| 3 | ಬೆಂ. ಗ್ರಾ. | 59527 | 55397 | 4130 |
| 4 | ಬೆಳಗಾಂ | 294080 | 285690 | 8390 |
| 5 | ಬಳ್ಳಾರಿ | 150404 | 147385 | 3019 |
| 6 | ಬೀದರ್ | 114350 | 111011 | 3339 |
| 7 | ಬಿಜಾಪುರ | 164858 | 161830 | 3028 |
| 8 | ಚಾಮರಾಜನಗರ | 74530 | 71661 | 2869 |
| 9 | ಚಿಕ್ಕಮಗಳೂರು | 70450 | 67756 | 2694 |
| 10 | ಚಿತ್ರದುರ್ಗ | 126127 | 123564 | 2563 |
| 11 | ದಕ್ಷಿಣಕನ್ನಡ | 54949 | 51518 | 3431 |
| 12 | ದಾವಣಗೆರೆ | 144722 | 141816 | 2906 |
| 13 | ಧಾರವಾಡ | 125654 | 121975 | 3679 |
| 14 | ಗದಗ | 88421 | 86388 | 2033 |
| 15 | ಗುಲ್ಬರ್ಗಾ | 193930 | 187922 | 6008 |
| 16 | ಹಾಸನ | 115329 | 110634 | 4695 |
| 17 | ಹಾವೇರಿ | 135932 | 132937 | 2995 |
| 18 | ಕೊಡಗು | 20270 | 18656 | 1614 |
| 19 | ಕೋಲಾರ | 92889 | 90166 | 2723 |
| 20 | ಕೊಪ್ಪಳ | 94889 | 91897 | 2992 |
| 21 | ಮಂಡ್ಯ | 134660 | 130915 | 3745 |
| 22 | ಮೈಸೂರು | 176913 | 170804 | 6109 |
| 23 | ರಾಯಚೂರು | 145990 | 141248 | 4742 |
| 24 | ಶಿವಮೊಗ್ಗ | 113841 | 108483 | 5358 |
| 25 | ತುಮಕೂರು | 198488 | 190121 | 8367 |
| 26 | ಉಡುಪಿ | 56109 | 52368 | 3741 |
| 27 | ಉತ್ತರಕನ್ನಡ | 97513 | 93172 | 4341 |
| 28 | ರಾಮನಗರ | 72696 | 70056 | 2640 |
| 29 | ಚಿಕ್ಕಬಳ್ಳಾಪುರ | 87589 | 84037 | 3552 |
| 30 | ಯಾದಗಿರಿ | 56256 | 52869 | 3387 |
| 31 | [illegible] | 17500 | 14775 | 2725 |
| | **ಒಟ್ಟು** | **3600717** | **3477807** | **122910** |

ಷರಾ:-ಬಾಕಿ ಇರುವ 122910 ಫಲಾನುಭವಿಗಳ ಪಾಸ್ ಪುಸ್ತಕಗಳನ್ನು 2024-25ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ಮುದ್ರಿಸಿ ವಿತರಿಸಲಾಗುವುದು.